**ದಿನಾಂಕಃ 21-02-2024        ಓ ಎಸ್ ನಂಃ 198/2022  (ಪಿ.ಡಬ್ಲ್ಯೂ.1 )**

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**<u>ಪಾಟೀ ಸವಾಲು</u>:ಶ್ರೀ ಪಿ ಎ ಪಿ  ವಕೀಲರಿಂದ ಪ್ರತಿವಾದಿಯರ ಪರಃ**

ಲತಾ ಮಾರುತಿ ಶಿಂದೆ ಉರ್ಫ ಅಕ್ಷತಾ ಆಕಾಶ  ಪೋಳ ಇವಳು ನನ್ನ ದೊಡ್ಡಪ್ಪಾ ಮಾರುತಿ ಇತನ  ಮಗಳು ಇರುತ್ತಾರೆ. ನನ್ನ ದೊಡ್ಡಪ್ಪಾ ಮಾರುತಿ ಇತನಿಗೆ ಒಟ್ಟು 4 ಜನ ಮಕ್ಕಳು, ಅವರಲ್ಲಿ 3 ಜನ ಗಂಡು ಮಕ್ಕಳು ಒಬ್ಬಳು ಹೆಣ್ಣು ಮಗಳು ಇರುತ್ತಾರೆ. ಅವರೆಂದರೆ ಸುಭಾಸ, ಅರುಣ ಮತ್ತು ಅಶೋಕ ಹಾಗೂ ಲತಾ ಇರುತ್ತಾರೆ. ಮೊದಲನೆ ಮಗ  ಸುಭಾಸ ಮೃತಪಟ್ಟಿದ್ದು ಆತನಿಗೆ ಸ್ನೆಹಲ ಅನ್ನುವ ಹೆಂಡತಿ ಇರುತ್ತಾರೆ, ಅವರಿಗೆ ಇಬ್ಬರೂ ಮಕ್ಕಳು, ಅವರಲ್ಲಿ ಡಾಲಿ ಅನ್ನುವ ಮಗಳು ಮೃತಪಟ್ಟಿದ್ದಾಳೆ, ಅವರ ಮಗ ಸಾಗರ ಇತನು ಮುಂಬೈನಲ್ಲಿ ಇರುತ್ತಾನೆ. ನನ್ನ ದೊಡ್ಡಪ್ಪನ ಮಗ ಅರುಣ ಜೀವಂತ ಇದ್ದಾನೆ. ನನ್ನ ದೊಡಪ್ಪನ ಮಗಳು ಲತಾ ಈಗ ಮೃತಪಟ್ಟಿದ್ದಾಳೆ. ಸದರಿ ಲತಾ ಇವಳ ಗಂಡ ಆಕಾಶ ಪೋಳ ಎಲ್ಲಿದ್ದಾರೆ ಅಂತಾ ನನಗೆ ಗೋತ್ತಿಲ್ಲಾ. ಸದರಿ ಲತಾ ಮತ್ತು ಆಕಾಶ ಇವರಿಗೆ ಮಕ್ಕಳು ಇರುವ ಬಗ್ಗೆ ನನಗೆ ಮಾಹಿತಿ ಇಲ್ಲಾ.  ಮೇಲೆ ಹೇಳಿದ ಲತಾ ಇವರ ಸಹೋದರರಾದ ಅರುಣ ಮತ್ತು ಸುಭಾಸನ ಹೆಂಡತಿ ಮಕ್ಕಳು ಈ ಕೇಸ ದಾಖಲಿಸಲು ನನಗೆ ಅಧಿಕಾರ ಪತ್ರ  ಬರೆದುಕೊಟ್ಟಿಲ್ಲಾ.

ದಾವೇದ ಆಸ್ತಿ ಸರ್ವೆ ನಂಃ 564/2 ಜಮೀನಿಗೆ ಸಂಬಂಧಿಸಿದಂತೆ ಈ ಮೊದಲು ನಡೆದ ಪ್ರಕರಣಗಳ ಬಗ್ಗೆ ನನಗೆ ಗೋತ್ತಿದೆ. ಮೊದಲಿಗೆ ಸದರಿ ಜಮೀನಿಗೆ  ಸರ್ವೆ ನಂಃ 564 ಅಂತಾ ಇತ್ತು ಅದು ಈಗ ಪೊಡಿ ಆಗಿದೆ. ಮೊದಲಿಗೆ  ಸರ್ವೆ ನಂಃ 564 ರಲ್ಲಿ ಲತಾ ಇವಳ ಹೆಸರಿಗೆ 38 ಗುಂಟೆ ಇತ್ತು ಆನಂತರ ನನ್ನ ದೊಡ್ಡಪ್ಪಾ  ತನ್ನ ಹೆಸರಿನಲ್ಲಿದ್ದ ಜಮೀನನ್ನು ತನ್ನ ಮಕ್ಕಳಿಗೆ ಬಿಟ್ಟು ಕೊಟ್ಟು ನಂತರ ಲತಾ ಇವಳ ಹೆಸರಿಗೆ 01 ಎಕರೆ 05 ಗುಂಟೆ ಚಿಲ್ಲರ ಆಣೆ ಜಮೀನು ಎಂಟ್ರೆ ಮಾಡಿಸಿದ್ದರು. ಸದರಿ ಲತಾ 38 ಗುಂಟೆ

**ದಿನಾಂಕಃ 21-02-2024 ಓ ಎಸ್ ನಂಃ 198/2022 (ಪಿ.ಡಬ್ಲ್ಯೂ1 )**

ಜಮೀನನ್ನು ಕೋರ್ಟ ಕಮೀಷನರ ಮುಖಾಂತರ ತಮ್ಮ ಹೆಸರಿಗೆ ಖರೀದಿ ಮಾಡಿಕೊಂಡಿದ್ದಾರೆ ಅಂದರೆ ಸಾಕ್ಷಿ ನನ್ನ ದೊಡ್ಡಪ್ಪಾ ಮುಂದೆ ನಿಂತು ಅದನ್ನು ಖರೀದಿ ಮಾಡಿದ್ದರು ಅಂತಾ ಹೇಳುತ್ತಾರೆ. ನಂತರ 07 ಗುಂಟೆ 11 ಆಣೆ 02 ಪೈಸೆ ಜಮೀನನ್ನು ನನ್ನ ದೊಡ್ಡಪ್ಪಾ ಮಾರುತಿ ತನ್ನ ಮಕ್ಕಳಿಗೆ ವಾಟ್ನಿ ಮಾಡುವ ಕಾಲಕ್ಕೆ ತನ್ನ ಮಗಳು ಲತಾ ಇವಳಿಗೆ ಬಿಟ್ಟು ಕೊಟ್ಟಿದ್ದಾಳೆ ಅಂದರೆ ನಿಜ. ಆದ್ದರಿಂದ ದಾವೇದ ಸರ್ವೆ ನಂಃ 564 ಕ್ಷೇತ್ರ 01 ಎಕರೆ 05 ಗುಂಟೆ 11 ಆಣೆ 02 ಪೈಸೆ ಆಸ್ತಿಗೆ ಸದರಿ ಲತಾ ಸಂಪೂರ್ಣ ಮಾಲಿಕಳು ಆಗಿದ್ದಳು ಅಂದರೆ ನಿಜ.

ದಾವೇದ ಆಸ್ತಿ ಪ್ರತಿವಾದಿ ಆನಂದ ಲಕ್ಷ್ಮಣ ಸೊನಾವನೆ ಇತನ ಹೆಸರಿಗೆ ಯಾವ ಆಧಾರದ ಮೇಲೆ ದಾಖಲಾಗಿದೆ ಅಂದರೆ ಸಾಕ್ಷಿ ಯಾವುದೇ ದಾಖಲೆ ಇಲ್ಲದೆ ಅವರ ಹೆಸರು ಹಚ್ಚಿಕೊಂಡಿದ್ದಾರೆ ಅಂತಾ ಹೇಳುತ್ತಾರೆ. 2005 – 06 ನೇ ಸಾಲಿನಲ್ಲಿ ದಾವೇದ ಆಸ್ತಿ ಪ್ರತಿವಾದಿ ಹೆಸರಿಗೆ ಎಂಟ್ರಿ ಆಗಿದೆ. ಪ್ರತಿವಾದಿಯ ಹೆಸರು ದಾವೇದ ಆಸ್ತಿಗೆ ದಾಖಲಾದ ವಿಷಯ ನಮಗೆ 2011- 12 ನೇ ಇಸ್ವಿಯವರೆ ಗೋತ್ತಿರಲಿಲ್ಲಾ ಆನಂತರ ಗೋತ್ತಾಗಿದೆ. ಲತಾ ಇವಳ ಸಹೋದರರಾದ ಅರುಣ ಮತ್ತು ಅಶೋಕ ಹಾಗೂ ಸುಭಾಸನ ಹೆಂಡತಿ ಮಕ್ಕಳು ಆಗಾಗ ಕೋಟಬಾಗಿಗೆ ಹೋಗುತ್ತಾರೆ ಅಂದರೆ ಸಾಕ್ಷಿ ವರ್ಷದಲ್ಲಿ ಒಂದೇರಡು ಬಾರಿ ಬಂದು ಹೋಗುತ್ತಾರೆ ಅಂತಾ ಹೇಳುತ್ತಾರೆ. ಅರುಣ ಮತ್ತು ಅಶೋಕ ಹಾಗೂ ಸುಭಾಸನ ಹೆಂಡತಿ ಮಕ್ಕಳ ಹೆಸರಿನಲ್ಲಿ ಕೋಟಬಾಗಿ ಗ್ರಾಮದಲ್ಲಿ ಜಮೀನುಗಳು ಇರುತ್ತವೆ. ಅವರು ಕೋಟಬಾಗಿಗೆ ಬಂದಾಗ ತಮ್ಮ ಆಸ್ತಿಗಳ ದಾಖಲೆಗಳನ್ನು ಪರಿಶೀಲಿಸುತ್ತಾರೆ ಅಂದರೆ ಸಾಕ್ಷಿ ಅವರಿಗೆ ಕನ್ನಡ ಬಾಷೆ ತಿಳಿಯುವುದಿಲ್ಲವಾದ್ದರಿಂದ ಅವರು ಅವುಗಳನ್ನು ನೋಡುವುದಿಲ್ಲಾ ಅಂತಾ ಹೇಳುತ್ತಾರೆ. ಸದರಿ 3 ಜನರ ಆಸ್ತಿಗಳನ್ನು ನನ್ನ ತಂದೆ ಜೀವಂತ ಇದ್ದಾಗ ಅವರು ದೇಕರೆಕಿ ಮಾಡುತ್ತಿದ್ದರು ಮತ್ತು ನನ್ನ ತಂದೆ ಮೃತಪಟ್ಟ ನಂತರ ನಾನು ಅವರ

ಜಮೀನುಗಳನ್ನು ನೋಡಿಕೊಳ್ಳುತ್ತಿದ್ದೆನೆ ಅಂದರೆ ನಿಜ. ಅವರಿಗೆ ನಾನು ಜಮೀನುಗಳ ಕ್ಷೇತ್ರ ಮತ್ತು ಇತರೆ ವಿಷಯ ಹೇಳುತ್ತೇನೆ ಅಂದರೆ ನಿಜ.

ಸರ್ವೆ ನಂಃ564 ಜಮೀನು 2009–10 ನೇ ಸಾಲಿನಲ್ಲಿ ಪೊಡಿಯಾಗಿರುತ್ತದೆ. ಪೊಡಿಯಾಗುವ ಕಾಲಕ್ಕೆ ಸರ್ವೆ ನಂಃ 564 ರಲ್ಲಿ ಮೇಲೆ ಹೇಳಿದ ಅರುಣ ಮತ್ತು ಅಶೋಕ ಹಾಗೂ ಸುಭಾಸನ ಹೆಂಡತಿ ಮಕ್ಕಳ ಹೆಸರುಗಳು ಮತ್ತು ಪ್ರತಿವಾದಿ ಆನಂದನ ಹೆಸರು ನಮೂದು ಇದ್ದವು ಅಂದರೆ ನಿಜ. ಸದರಿಯವರ ಹೆಸರುಗಳ ಮುಂದೆ ತಮ್ಮ ತಮ್ಮ ಕ್ಷೇತ್ರಗಳ ಎಕರೆ ಗುಂಟೆ ಜಮೀನು ನಮೂದು ಇತ್ತು ಅಂದರೆ ನಿಜ. ಅದೇ ರೀತಿ ನನ್ನ ತಂದೆಯ ಹೆಸರು ಸಹ ಸರ್ವೆ ನಂಃ 564 ರಲ್ಲಿ ನಮೂದು ಹಾಗೂ ಇತ್ತು ಅವರ ಹೆಸರಿನ ಮುಂದೆ ಕ್ಷೇತ್ರ ಸಹ ನಮೂದು ಇತ್ತು. ಪೊಡಿಯಾಗುವ ವಿಷಯ ಅರುಣ ಮತ್ತು ಅಶೋಕ ಹಾಗೂ ಸುಭಾಸನ ಹೆಂಡತಿ ಮಕ್ಕಳ ಹೆಸರುಗಳು ಹಾಗೂ ಪ್ರತಿವಾದಿ ಆನಂದನ ಇವರಿಗೆಲ್ಲರಿಗೆ ತಿಳಿಸಿರುತ್ತಾರೆ ಅಂದರೆ ಸರಿಯಲ್ಲ. ಪೊಡಿಯಾದ ನಂತರ ನಾನು ಸದರಿ ವಿಷಯವನ್ನು ಅರುಣ ಮತ್ತು ಅಶೋಕ ಹಾಗೂ ಸುಭಾಸನ ಹೆಂಡತಿ ಮಕ್ಕಳಿಗೆ ತಿಳಿಸಿರುತ್ತೆನೆ. ಪೊಡಿಯಾಗುವ ಕಾಲಕ್ಕೆ ಸರ್ವೆಯಾಗಿ ನಕಾಶೆ ಮಾಡಿದ ನಂತರ ಸದರಿ ಸರ್ವೆ ಮಾಡಿದ ನಕಾಶೆ ಮತ್ತು ಪೊಡಿಯನ್ನು ನಾವು ಯಾವುದೇ ರೀತಿ ಪ್ರಶ್ನಿಸಿಲ್ಲಾ ಮತ್ತು ಅಪೀಲು ಹಾಕಿಲ್ಲಾ. ನಮಗೆ ಅಪೀಲು ಅವಧಿ ಮುಗಿದ ನಂತರ ಪೊಡಿಯಾಗಿರುವುದು ಗೊತ್ತಾಗಿರುತ್ತದೆ.

ನನ್ನ ತಂದೆ ಬುಜಂಗರಾವ ಪ್ರತಿವಾದಿ ಆನಂದನ ವಿರುದ್ಧ ದಾವೇದ ಆಸ್ತಿಯಲ್ಲಿ ರಸ್ತೆ ಬೇಕು ಅಂತಾ ಹುಕ್ಕೇರಿಯ ಸಿವಿಲ್ ಜಡ್ಜ ಕೋರ್ಟನಲ್ಲಿ ಒಂದು ದಾವೇ ಮಾಡಿದ್ದರು ಅಂದರೆ ನಿಜ. ಸರ್ವೆ ನಂಃ 564 ಪೊಡಿಯಾಗುವ ಮೊದಲು ನನ್ನ ತಂದೆ ಸದರಿ ಕೇಸ ದಾಖಲಿಸಿದ್ದರು. ಸದರಿ ದಾವೇ ಚೌಕಾಶಿಯಾಗಿ ನನ್ನ ತಂದೆಯ ಹಾಕಿದ ದಾವೇ ಸರಿ ಇಲ್ಲಾ ಅಂತಾ ವಜಾ ಆಗಿದೆ ಅಂದರೆ ನಿಜ. ಆನಂತರ ನನ್ನ ತಂದೆ ಸದರಿ

**ದಿನಾಂಕಃ 21-02-2024 ಓ ಎಸ್ ನಂಃ 198/2022 (ಪಿ.ಡಬ್ಲ್ಯೂ.1 )**

ಆದೇಶದ ವಿರುದ್ಧ ಅಪೀಲು ಸಲ್ಲಿಸಿದ್ದು ಸದರಿ ಅಪೀಲು ಸಹ ವಜಾ ಆಗಿದೆ ಅಂದರೆ ನಿಜ. ನಂತರ ನಾವು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ 2 ನೇ ಅಪೀಲು ಸಲ್ಲಿಸಿದ್ದು ಸದರಿ ಅಪೀಲು ಸಹ ವಜಾ ಆಗಿದೆ ಅಂದರೆ ನಿಜ. ನನ್ನ ತಂದೆಗೆ ಪ್ರತಿವಾದಿ ಜಮೀನಿನಲ್ಲಿ ದಾರಿ ನೀಡದೇ ಇದ್ದುದ್ದರಿಂದ ನಮ್ಮ ಮತ್ತು ಅವರ ಮಧ್ಯೆ ವೈ ಮನಸ್ಸು ಇದೆ ಸಾಕ್ಷಿ 1996 ರಿಂದ ನಮಗೂ ಮತ್ತು ಪ್ರತಿವಾದಿಗೂ ವೈ ಮನಸ್ಸು ಇದೆ ಅಂತಾ ಹೇಳುತ್ತಾರೆ.

( ಈ ಹಂತದಲ್ಲಿ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲು ಮುಂದೂಡಿದೆ)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

Sd/-

ಹಿರಿಯ ದಿವಾಣಿ ನ್ಯಾಯಾಧೀಶರು , ಹುಕ್ಕೇರಿ.